# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 378 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16.02.2023 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ಗೋದಾಮುಗಳಲ್ಲಿ ಅನ್ನಭಾಗ್ಯದ ಅಕ್ಕಿ, ಗೋಧಿ, ಅಹಾರ ಧಾನ್ಯಗಳ ರಾಶಿಯು ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೊಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಇದರ ಸಂರಕ್ಷಣೆಗೆ ಹಾಗೂ ಸರಿಯಾದ ವಿತರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಪ್ರತಿ ಸಂಗ್ರಹಗಾರ/ ತಾಲ್ಲೂಕು/ ಜಿಲ್ಲಾವಾರು ಎಷ್ಟು ಪ್ರಮಾಣದ ಆಹಾರ ಧಾನ್ಯಗಳು ಹಾನಿಯಾಗಿದೆ; (ಹಾನಿಯಾದ ಆಹಾರ ಧಾನ್ಯಗಳ ಪ್ರಮಾಣ ಸಹಿತ ವಿವರ ನೀಡುವುದು) | ಇಲ್ಲ,<br>ಪ್ರತಿ ತಿಂಗಳು ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸಲಾಗುವ ಆಹಾರ ಧಾನ್ಯಗಳನ್ನು ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ಮುಂದಿನ ತಿಂಗಳಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡಲಾಗುತ್ತದೆ. ಇದರಿಂದಾಗಿ ಪಡಿತರ ಗೋದಾಮುಗಳಲ್ಲಿ ದೀರ್ಘಕಾಲದ ಆಹಾರಧಾನ್ಯಗಳ ಶೇಖರಣೆ ಇರುವುದಿಲ್ಲ ಹಾಗೂ ಯಾವುದೇ ಆಹಾರ ಧಾನ್ಯ ಕೊಳೆತಿರುವುದಿಲ್ಲ. |
| ಆ | ಈ ನಿಟ್ಟಿನಲ್ಲಿ ಸಂಭವಿಸಿದ ಹಾನಿಗೆ ಯಾರು ಹೊಣೆಗಾರರು ಅವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ಹೆಸರು, ಹುದ್ದೆವಾರು ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ | 2020-21. 2021-22ನೇ ಸಾಲುಗಳಲ್ಲಿ ಸರ್ಕಾರು ವಿತರಿಸಿದ ಒಟ್ಟು ಆಹಾರ ಧಾನ್ಯಗಳ ಪ್ರಮಾಣ ಎಷ್ಟು; ಈ ಪೈಕಿ ವಿತರಿಸಲಾದ ಆಹಾರದ ಪ್ರಮಾಣ ಎಷ್ಟು; ಅವು ಯಾವುವು; ಗೋದಾಮುಗಳಲ್ಲಿ ಉಳಿದ ಆಹಾರ ಧಾನಗಳ ಪ್ರಮಾಣವೆಷ್ಟು; | 2020-21 ಮತ್ತು 2021-22ನೇ ಸಾಲುಗಳಲ್ಲಿ ಅನ್ನಭಾಗ್ಯ ಯೋಜನೆಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲಾದ ಆಹಾರಧಾನ್ಯಗಳ ಪ್ರಮಾಣದ ವಿವರ ಈ ಕೆಳಕಂಡಂತಿದೆ. |

2020-21

| ಆಹಾರಧಾನ್ಯ | ಪ್ರಮಾಣ (MT) |
|---|---|
| ಅಕ್ಕಿ | 4243103.344 |
| ರಾಗಿ | 193243.068 |
| ಜೋಳ | 9256.348 |
| ಗೋಧಿ | 275061.202 |

| | |
|---|---|
| ತೊಗರಿಬೇಳೆ | 38168.184 |
| ಕಡಲೆ | 66158.200 |
| ಒಟ್ಟು | 4824990.346 |

2021-22

| ಆಹಾರಧಾನ್ಯ | ಪ್ರಮಾಣ (MT) |
|---|---|
| ಅಕ್ಕಿ | 4422133.784 |
| ರಾಗಿ | 475235.194 |
| ಜೋಳ | 80866.169 |
| ಗೋಧಿ | 248717.340 |
| ಒಟ್ಟು | 5226952.487 |

ಪ್ರಸ್ತುತ ಪಡಿತರ ವಿತರಣೆಯನ್ನು ಆಧಾರ್ PoS ಮೂಲಕ ವಿತರಿಸುವುದರಿಂದ, ವಿತರಣೆಯಾಗದ ಯಾವುದೇ ದಾಸ್ತಾನನ್ನು ಪ್ರತಿ ಮಾಹೆಯ NFSA ಅಂತಿಮ ದಾಸ್ತಾನಾಗಿ ಪರಿಗಣಿಸಿ ಕೇಂದ್ರ ಸರ್ಕಾರಕ್ಕೆ ಘೋಷಣೆ ಮಾಡಲಾಗುತ್ತದೆ. ಈ ರೀತಿ ಘೋಷಿಸುವ ಅಂತಿಮ ದಾಸ್ತಾನನ್ನು ಕಡಿತಗೊಳಿಸಿ ಮುಂದಿನ ಮಾಹೆಯ ಹಂಚಿಕೆಯನ್ನು ವಿತ್ತುವಳಿ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋದಾಮುಗಳಲ್ಲಿ ಆಹಾರ ಧಾನ್ಯಗಳು ಉಳಿಕೆಯಾಗಿ ವ್ಯರ್ಥವಾಗುವ ಸಂಭವವಿರುವುದಿಲ್ಲ.

ಈ) 2020-21, 2021-22ನೇ ಸಾಲಿನಲ್ಲಿ ಅನ್ನಭಾಗ್ಯ ಯೋಜನೆಯಡಿ ಖರ್ಚಾದ ಅನುದಾನವೆಷ್ಟು; ನಿಗಧಿಪಡಿಸಿದ್ದ ಅನುದಾನವೆಷ್ಟು; (ವಿವರ ನೀಡುವುದು)

2020-21, 2021-22ನೇ ಸಾಲುಗಳಲ್ಲಿ ಅನ್ನಭಾಗ್ಯ ಯೋಜನೆಯಡಿ ನಿಗಧಿಪಡಿಸಿದ, ಖರ್ಚಾದ ಹಾಗೂ ಉಳಿದ ಅನುದಾನದ ವಿವರ:

(ರೂ.ಲಕ್ಷಗಳಲ್ಲಿ)

| 2020-21 | | |
|---|---|---|
| ನಿಗಧಿಪಡಿಸಿದ ಅನುದಾನ | ಖರ್ಚಾದ ಅನುದಾನ | ಉಳಿದ ಅನುದಾನ |
| 325762.00 | 310365.77 | 15396.23 |

| 2021-22 | | |
|---|---|---|
| ನಿಗಧಿಪಡಿಸಿದ ಅನುದಾನ | ಖರ್ಚಾದ ಅನುದಾನ | ಉಳಿದ ಅನುದಾನ |
| 664567.00 | 660600.13 | 3966.87 |

| | | |
|---|---|---|
| ಉ | ಪ್ರತಿ ಕೆ.ಜಿ ಆಹಾರ ಧಾನ್ಯವನ್ನು ಸಂಗ್ರಹಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುವ ಪಾಲು ಎಷ್ಟು? (ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಕರ್ನಾಟಕ ರಾಜ್ಯಕ್ಕೆ ಪ್ರತಿ ತಿಂಗಳು 2,17,403 ಮೆ.ಟನ್ ಅಕ್ಕಿ ಪೂರೈಕೆಯಾಗುತ್ತದೆ. ಈ ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ಡಿಸೆಂಬರ್ – 2022 ರವರೆಗೆ ಪ್ರತಿ ಕೆ.ಜಿ.ಗೆ ರೂ.3/- ರಂತೆ ಖರೀದಿಸಲಾಗುತ್ತಿತ್ತು. ಜನವರಿ 2023 ರಿಂದ ಈ ಹಂಚಿಕೆಯನ್ನು ಕೇಂದ್ರ ಸರ್ಕಾರದಿಂದ ಉಚಿತವಾಗಿ ನೀಡಲಾಗುತ್ತಿದೆ.<br>ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ವಿತರಿಸಿರುವ ಆದ್ಯತಾ ಪಡಿತರ ಚೀಟಿಗಳ 33 ಲಕ್ಷ ಫಲಾನುಭವಿಗಳಿಗೆ ಅಗತ್ಯವಿರುವ 16,500 ಮೆ.ಟನ್ ಅಕ್ಕಿಯನ್ನು ಪ್ರತಿ ತಿಂಗಳು ಭಾರತ ಆಹಾರ ನಿಗಮದಿಂದ OMSS ದರ ಪ್ರತಿ ಕೆ.ಜಿ.ಗೆ ರೂ.23/- ರಂತೆ ಖರೀದಿಸಲಾಗುತ್ತಿತ್ತು.<br>ಅಕ್ಟೋಬರ್ 2022 ರ ಮಾಹೆಯಿಂದ ಕೇಂದ್ರ ಸರ್ಕಾರವು OMSS ಅಕ್ಕಿಯ ಪೂರೈಕೆಯನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ 50,000 ಮೆ.ಟನ್ ಅಕ್ಕಿಯನ್ನು ಪ್ರತಿ ಕೆ.ಜಿ. ಅಕ್ಕಿಗೆ ರೂ.32.94 ದರದಲ್ಲಿ ಕೇಂದ್ರ ಸರ್ಕಾರ ಸಂಸ್ಥೆಯಾದ NCCF (National Cooperative Consumers Federation of India Limited) ಸಂಸ್ಥೆಯಿಂದ ಖರೀದಿಸಿ, ಪಡಿತರ ಫಲಾನುಭವಿಗಳಿಗೆ ವಿತರಿಸಲಾಗಿದೆ. |

ಆನಾಸ 24 ಡಿಆರ್ಎ 2023 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ